ಹಾಗೆಯೇ, ವಲಯ ಅರಣ್ಯ ಅಧಿಕಾರಿ ವೃಂದಕ್ಕೆ ಸಂಬಂಧಪಟ್ಟಂತೆ ಮಾನ್ಯ ನ್ಯಾಯಾಲಯದಲ್ಲಿ ಬಾಕಿಯಿರುವ ಪ್ರಕರಣಗಳನ್ನು ಹೊರತುಪಡಿಸಿ, ಉಳಿದ ವಲಯ ಅರಣ್ಯ ಅಧಿಕಾರಿಗಳಿಗೆ ಸ್ಥಳ ನಿಯುಕ್ತಿಗೊಳಿಸುವ ಬಗ್ಗೆ ಶೀಘ್ರ ಕ್ರಮ ಕೈಗೊಳ್ಳಲಾಗುತ್ತದೆ.

ಆಸರೆ ಯೋಜನೆಯ ಪ್ರಗತಿ

50(53) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಸರೆ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ನಿರ್ಮಿಸಲಾಗಿರುವ ಮನೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು)

ಆ) ಈ ಯೋಜನೆಯನ್ನು ಎಷ್ಟು ಅವಧಿಯೊಳಗೆ ಪೂರ್ಣಗೊಳಿಸುವ ಉದ್ದೇಶವನ್ನು ಸರ್ಕಾರ ಹೊಂದಿತ್ತು; ಈ ಯೋಜನೆ ಈಗ ಪೂರ್ಣವಾಗಿದೆಯೆ: ಇಲ್ಲದಿದ್ದಲ್ಲಿ ಕಾರಣಗಳೇನು;

ಇ) ಈ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು ಮುಂದೆ ಬಂದಿದ್ದ ದಾನಿಗಳ ಹೆಸರು ವಿವರ ನೀಡುವುದು; ಈ ಪೈಕಿ ಎಷ್ಟು ದಾನಿಗಳು ಯಾವ ಕಾರಣಕ್ಕೆ ಈ ಯೋಜನೆಯಿಂದ ಹಿಂದೆ ಸರಿದಿದ್ದಾರೆ;

ಈ) ಈ ಯೋಜನೆಗೆ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು;

ಉ) ಈ ಯೋಜನೆಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರದ ಮುಂದೆ ಇರುವ ಕ್ರಮಗಳೇನು?

ಶ್ರೀ ಜಿ. ಕರುಣಾಕರರೆಡ್ಡಿ (ಕಂದಾಯ ಸಚಿವರು)

ಅ)	ಜಿಲ್ಲೆ	ಪೂರ್ಣಗೊಂಡ ಮನೆಗಳು
1	ಬಾಗಲಕೋಟೆ	3235
2	ಬೆಳಗಾಂ	680
3	ಬಳ್ಳಾರಿ	2371
4	ಬೀದರ್	29
5	ಬಿಜಾಪುರ	1052

6	ದಾವಣಗೆರೆ	166
7	ಧಾರವಾಡ	1344
8	ಗದಗ	1710
9	ಗುಲ್ಬರ್ಗಾ	1427
10	ಹಾವೇರಿ	264
11	ಕೊಪ್ಪಳ	1017
12	ರಾಯಚೂರು	3798
13	ಉತ್ತರ ಕನ್ನಡ	50
14	ಯಾದಗಿರಿ	51
	ಒಟ್ಟು	17194

ಆ) ಈ ಯೋಜನೆಯನ್ನು ಡಿಸೆಂಬರ್ 2010ರ ಅಂತ್ಯದೊಳಗೆ ಪೂರ್ಣಗೊಳಿಸುವ ಉದ್ದೇಶವನ್ನು ಸರ್ಕಾರ ಹೊಂದಿತ್ತು. ಭೂಸ್ವಾಧೀನ ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ದಾವೆ, ದಾನಿಗಳು ಹಿಂದೆ ಸರಿದಿದ್ದರಿಂದ, ಮಳೆಗಾಲದಲ್ಲಿ ಕಚ್ಚಾ ಸಾಮಾಗ್ರಿಗಳನ್ನು ಸಾಗಿಸಲು ತೊಂದರೆ ಮುಂತಾದ ಕಾರಣಗಳಿಂದ ವಿಳಂಬವಾಗಿದೆ. ಶೇಕಡ 80ರಷ್ಟು ಮನೆಗಳನ್ನು 2011ರ ಮಾರ್ಚ್ ಅಂತ್ಯದ ವೇಳೆಗೆ ಪೂರ್ಣಗೊಳಿಸಿ ಇನ್ನುಳಿದ ಮನೆಗಳನ್ನು 2011ರ ಏಪ್ರಿಲ್ ಅಂತ್ಯದೊಳಗೆ ಪೂರ್ಣಗೊಳಿಸಲು ಸರ್ಕಾರವು ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಇ) ಈ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು ಮುಂದೆ ಬಂದಿದ್ದು ದಾನಿಗಳ ವಿವರ ಅನುಬಂಧ–1ರಲ್ಲಿ ಮತ್ತು ಹಿಂದೆ ಸರಿದ ದಾನಿಗಳ ವಿವರವನ್ನು ಅನುಬಂಧ–2ರಲ್ಲಿ ನೀಡಿದೆ.

ಈ) ಈ ಯೋಜನೆಗೆ ಇಲ್ಲಿಯವರೆಗೆ ರೂ. 34901–05 ಲಕ್ಷಗಳನ್ನು ಬಿಡುಗಡೆ ಮಾಡಿದೆ.

ಉ) ಸ್ಥಳಾಂತರಗೊಳ್ಳುವ ಹಳ್ಳಿಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಸರ್ಕಾರವೇ ಕೈಗೆತ್ತಿಕೊಂಡಿದೆ. ದಾನಿಗಳು ಮನೆ ನಿರ್ಮಾಣ ಮಾಡಲು ಸರ್ಕಾರದ ಜೊತೆ ಕೈಜೋಡಿಸಿರುತ್ತಾರೆ.

ಆಸರೆ ಯೋಜನೆಯಡಿ ದಾನಿಗಳು/ನಿರ್ಮಾಣ ಸಂಸ್ಥೆಗಳು ನಿರ್ಮಿಸುತ್ತಿರುವ ಮನೆಗಳಿಗೆ ಅವಶ್ಯವಿರುವ ಕಚ್ಚ ಸಾಮಾಗ್ರಿಗಳ ಮೇಲೆ ವಿಧಿಸಲಾಗುವ ವ್ಯಾಟ್ ತೆರಿಗೆಯನ್ನು ಸರ್ಕಾರದಿಂದ ಮರು ಪಾವತಿ ಮಾಡಲು ಆದೇಶ ಹೊರಡಿಸಲಾಗಿದೆ.

ವಿದ್ಯುಚ್ಛಕ್ತಿ ವ್ಯತ್ಯಯ ಗ್ರಾಮಗಳಲ್ಲಿ ಡೀಸೆಲ್ ಜನರೇಟರ್‌ಗಳನ್ನು ಬಾಡಿಗೆ ಆಧಾರದ ಮೇಲೆ ಉಪಯೋಗಿಸಿಕೊಳ್ಳಲು ಅನುಮೋದನೆ ನೀಡಲಾಗಿದೆ.

ನೆರೆ ಪೀಡಿತ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಆಸರೆ ಯೋಜನೆಯ ಮನೆಗಳ ಪ್ರಗತಿಯ ಬಗ್ಗೆ ಪರಿವೀಕ್ಷಣೆ ನಡೆಸಿ, ವರದಿಯನ್ನು ಸಲ್ಲಿಸುವ ಸಲುವಾಗಿ ನೋಡಲ್ ಅಧಿಕಾರಗಳ ನೇಮಿಸಲಾಗಿದೆ. ಸಚಿವಾಲಯದ ಅಧಿಕಾರಿಗಳು ಸಹ ಜಿಲ್ಲೆಗಳಲ್ಲಿ ಪ್ರವಾಸ ಮಾಡಿ ವರದಿ ನೀಡುತ್ತಿದ್ದಾರೆ.

ಅನುಬಂಧ–1

ಆಸರೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು ಮುಂದೆ ಬಂದ ದಾನಿಗಳ ವಿವರ

ಕ್ರ.ಸಂ.	ದಾನಿಗಳ ಹೆಸರು
1	ಆರ್ಟ್ ಆಫ್ ಲೀವಿಂಗ್
2	ಅಂಬಿಕಾ ಮೈನ್ಸ್
3	ಎ.ಸಿ.ಸಿ. ವಾಡಿ
4	ಬಯೋಕಾನ್ & ಬಯೋಟೆಕ್ನಾಲಜಿ–ಟೌನ್‌ಶಿಪ್
5	ಭೋರುಕ ಪವರ್ ಕಾರ್ಪೋರೇಷನ್
6	ಭಾರತಿ ಏರ್‌ಟೆಲ್
7	ಬಿಎಂಎಂ ಇಸ್ಪಾಟ್, ಬಳ್ಳಾರಿ
8	ಸಿಸ್ಕೋ
9	ಸಿಟಿಜನ್ಸ್ ಫೋರಮ್, ಮೈಸೂರು (ಜೆ.ಎಸ್.ಎಸ್)
10	ಕಾಫಿ ಡೇ
11	ಡಿ.ವೈ.ಉಪ್ಪರ್, ಬೆಳಗಾಂ

ಕ್ರ.ಸಂ.	ದಾನಿಗಳ ಹೆಸರು
12	ಧರ್ಮಸ್ಥಳ
13	ಎಸ್ಸಾರ್ ಗ್ರೂಪ್ ಮುಂಬೈ–ಟೌನ್‌ಶಿಪ್
14	ಜಿಎಂಆರ್ ಗ್ರೂಪ್–ಟೌನ್‌ಶಿಪ್
15	ಗೋವಿಂದ್ ಪ್ರಸಾದ್ ಹುಮ್ಯಾನಿಟೇರಿಯನ್ ಫೌಂಡೇಷನ್
16	ಹೋಪ್ ಫೌಂಡೇಷನ್, ರಾಯಚೂರು
17	ಹೆಚ್. ರಂಗನಗೌಡ ಮೈನ್ಸ್
18	ಹಟ್ಟಿ ಗೋಲ್ಡ್ ಮೈನ್ಸ್
19	ಹೊತೂರ್ ಟ್ರೇಡರ್ಸ್
20	ಇನ್‌ಫೋಸಿಸ್ ರಾಮ್‌ದಾಸ್–ಟೌನ್‌ಶಿಪ್
21	ಜಿಂದಾಲ್ ಸ್ಟೀಲ್ಸ್ ಲಿ.,
22	ಕಲ್ಯಾಣಿ ಇಂಡಸ್ಟ್ರೀಸ್–ಟೌನ್‌ಶಿಪ್
23	ಕೆಎಂಎಂಐ, ಬಳ್ಳಾರಿ
24	ಕ್ರೇಡಾಯ್
25	ಕನ್ನಿಹಾಲ್ ದುದೆರಿಯಾ ಮೈನ್ಸ್
26	ಮಾತಾ ಅಮೃತ ಆನಂದಮಯಿ
27	ಪಿ.ಇ.ಎಸ್. ಇನ್ಸಿಟ್ಯೂಷನ್ಸ್
28	ಪೇಜಾವರ್ ಮಠ್, ಉಡುಪಿ
29	ರಾಮಕೃಷ್ಣ ಆಶ್ರಮ
30	ಆರ್.ಎನ್. ಶೆಟ್ಟಿ–ಟೌನ್‌ಶಿಪ್
31	ರಾಜೀವ್ ಚಂದ್ರಶೇಖರ್
32	ರೇಣುಕಾ ಶುಗರ್ಸ್–ಟೌನ್‌ಶಿಪ್
33	ಸ್ಮಿರೋ
34	ಸೇವಾ ಭಾರತಿ

ಕ್ರ.ಸಂ.	ದಾನಿಗಳ ಹೆಸರು
35	ಶಂಕರ ನಾರಾಯಣ ಕನ್ಸ್‌ಟ್ರಕ್ಷನ್ಸ್
36	ಶ್ರೀ ಸಿದ್ಧಗಂಗಾ ಮಠ್
37	ಟಿ.ವಿ. 9
38	ಟಾಟಾ ರಿಲೀಫ್ ಕಮಿಸಿ–ಟೌನ್‌ಶಿಪ್
39	ವಿ.ಎಸ್. ಲ್ಯಾಡ್ ಮೈನಿಂಗ್ ಕಂಪನಿ
40	ವೆಸ್ಕೋ
41	ಭಾರತೀಯ ಸೇವಾ ದಳ
42	ಸೆಂಚೂರಿ ಗ್ರೂಪ್
43	ಚಂದ್ರಶೇಖರ ಸ್ವಾಮೀಜಿ
44	ಕ್ಲೀನರ್ ಜೆನ್ ಕಾರ್ಪೋರೇಷನ್, ಶ್ರೀ ರವಿಕಾಂತ್, ಎಕ್ಸ್‌ವಿಪಿ
45	ಕ್ಯಾನ್ ಹೋಲ್ಡಿಂಗ್ ಗ್ರೂಪ್, ನೆಥರ್‌ಲ್ಯಾಂಡ್ಸ್
46	ಡಾಲ್ಮಿಯಾ ಸಿಮೆಂಟ್ಸ್
47	ಕಟ್ಟಾ ಫೌಂಡೇಷನ್
48	ಕಮ್ಮವಾರಿ ಸಂಘ, ರಾಯಚೂರು–ಟೌನ್‌ಶಿಪ್
49	ಎಲ್ & ಟಿ–ಟೌನ್‌ಶಿಪ್
50	ಮೆಟ್ರೋ ಕಾ., ಬೆಂಗಳೂರು–ಟೌನ್‌ಶಿಪ್
51	ಮೈಸೂರು ಮಿನರಲ್ಸ್
52	ವಿಪ್ರೋ–ಟೌನ್‌ಶಿಪ್
53	ಎಂ.ಆರ್.ಪಿ.ಎಲ್., ಮಂಗಳೂರು
54	ಬಿ.ಇ.ಎಂ.ಎಲ್. ಬೆಂಗಳೂರು
55	ಸೇವಾ, ರಾಯಚೂರು
56	ಆದಿ ಚುಂಚನಗಿರಿ ಮಹಾಸಂಸ್ಥಾನ ಮಠ

ಅನುಬಂಧ–2

ಆಸರೆ ಯೋಜನೆಯಡಿಯಲ್ಲಿ ಮನೆಗಳನ್ನು ನಿರ್ಮಿಸಲು ಹಿಂದೆ ಸರಿದ ದಾನಿಗಳ ವಿವರ

1	ಭಾರತೀಯ ಸೇವಾ ದಳ
2	ಸೆಂಚೂರಿ ಗ್ರೂಪ್
3	ಚಂದ್ರಶೇಖರ ಸ್ವಾಮೀಜಿ
4	ಕ್ಲೀನರ್ ಜೆನ್ ಕಾರ್ಪೋರೇಷನ್, ಶ್ರೀ ರವಿಕಾಂತ್, ಎಕ್ಸ್‌ವಿಪಿ
5	ಕ್ಯಾನ್ ಹೋಲ್ಡಿಂಗ್ ಗ್ರೂಪ್, ನೆಥರ್‌ಲ್ಯಾಂಡ್ಸ್
6	ಡಾಲ್ಮಿಯಾ ಸಿಮೆಂಟ್ಸ್
7	ಕಟ್ಟಾ ಫೌಂಡೇಷನ್
8	ಕಮ್ಮವಾರಿ ಸಂಘ, ರಾಯಚೂರು–ಟೌನ್‌ಶಿಪ್
9	ಎಲ್ & ಟಿ–ಟೌನ್‌ಶಿಪ್
10	ಮೆಟ್ರೋ ಕಾ., ಬೆಂಗಳೂರು–ಟೌನ್‌ಶಿಪ್
11	ಮೈಸೂರು ಮಿನರಲ್ಸ್
12	ವಿಪ್ರೋ–ಟೌನ್‌ಶಿಪ್
13	ಎಂ.ಆರ್.ಪಿ.ಎಲ್., ಮಂಗಳೂರು
14	ಬಿ.ಇ.ಎಂ.ಎಲ್. ಬೆಂಗಳೂರು
15	ಸೇವಾ, ರಾಯಚೂರು

ಕೇಂದ್ರ ಸರ್ಕಾರದ ಎಐಬಿಪಿ ಯೋಜನೆ

51(143) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕೇಂದ್ರ ಸರ್ಕಾರದ ತ್ವರಿತ ನೀರಾವರಿ ಸೌಲಭ್ಯ ಕಲ್ಪಿಸುವ ಕಾರ್ಯಕ್ರಮ ಎ.ಐ.ಬಿ.ಪಿ. ದಡಿಯಲ್ಲಿ 2009–10 ಮತ್ತು 2010–11ನೇ ಸಾಲಿನಲ್ಲಿ ವಿವಿಧ ಜಿಲ್ಲೆಗಳಲ್ಲಿ ಎಷ್ಟು ಮೊತ್ತದ ಎಷ್ಟು ಸಣ್ಣ ನೀರಾವರಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿತ್ತು;